# ಆಮೇಲೆ ಮಾಡು!

ಹೊಸ ಸಿಮ್ ಖರೀದಿಸಿದ ಪಮ್ಮಿ ತನ್ನ ಪತಿಗೆ ಸರ್‌ಪ್ರೈಸ್ ಕೊಡಲೆಂದು ಆತನ ಎದುರು ಅಡುಗೆಮನೆಗೆ ಹೋದಂತೆ ನಟಿಸಿ, ಮೆತ್ತಗೆ ಅಲ್ಲಿಂದ ತಾರಸಿ ಮೇಲೆ ಹೋಗಿ ಆತನ ಮೊಬೈಲ್‌ಗೆ ಕರೆ ಮಾಡಿ, ವಯ್ಯಾರದಿಂದ, 'ಹಾಯ್ ಡಾರ್ಲಿಂಗ್...' ಎಂದಳು. ಆತ ದಡಬಡಿಸುತ್ತ, 'ಏಯ್. ಇದ್ಯಾವ ನಂಬರು? ಈಗ್ಯಾಕೆ ಕಾಲ್ ಮಾಡ್ದೆ? ಅವಳು ಇಲ್ಲೇ ಅಡುಗೆಮನೆಯಲ್ಲಿದ್ದಾಳೆ, ಆಮೇಲೆ ಮಾಡು' ಎಂದು ಹೇಳಿ ಕಾಲ್ ಕಟ್ ಮಾಡಿದ.

**ಅರವಿಂದ ಜಿ. ಜೋಷಿ**



# ಮನೆ, ಅಳಿಯ

ರಮೇಶ, 'ಮನೆ, ಅಳಿಯ ಬೇಕು' ಎನ್ನುವ ಮ್ಯಾಟ್ರಿಮೊನಿಯಲ್ ಜಾಹೀರಾತು ನೋಡಿ ರಮಣಿಯನ್ನು ಮದುವೆಯಾದ. ಹೆಂಡತಿಯ ಮನೆಗೆ ಹೋದ ಮೊದಲ ದಿನ ಅವನ ಮಾವ, 'ಅಳಿಯಂದ್ರೆ, ನೀವೇನೊ ಬಂದ್ರಿ, ಮನೆ ಎಲ್ಲಿ?' ಎಂದು ಕೇಳಿದಾಗ ಗಾಬರಿಯಾದ. 'ನೀವು ಮನೆ ಅಳಿಯ ಬೇಕು ಅಂತಲ್ಲವೆ ಕೇಳಿದ್ದು?' ಎಂದ. ಆಗ ಮಾವ ಹೇಳಿದರು, 'ಮನೆ, ಅಳಿಯ ಅಂದ್ರೆ ಮನೆ ಮತ್ತು ಅಳಿಯನನ್ನ ಕೇಳಿ ಜಾಹೀರಾತು ಕೊಟ್ಟಿದ್ದು' ಎಂದಾಗ ಗುಂಡ, 'ಅಯ್ಯೋ, ನಾನು ಸರಿಯಾಗಿ ನೋಡಲಿಲ್ಲವಲ್ಲ. ನೀವು ಮನೆ ಮತ್ತು ಅಳಿಯನನ್ನ ಕೇಳಿದ್ದೀರಿ ಅಂತ ಹೊಳಿಲಿಲ್ಲ, ನಿಮ್ಮನೆಗೆ ಅಳಿಯ ಬೇಕು ಎನ್ನುತ್ತಿದ್ದೀರಿ ಅಂತ ತಿಳಿದೆ' ಎಂದು ಪೇಚಾಡಿದ. ತನ್ನನ್ನು ವ್ಯಾಕರಣ ಟೀಚರ್ ಬೈಯ್ಯುತ್ತಿದ್ದುದನ್ನು ಜ್ಞಾಪಿಸಿಕೊಂಡ ರಮೇಶ. ತಾನು ಯಾವಾಗಲೂ ಸಂಜ್ಞೆಗಳನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಲಿಲ್ಲ ಎಂದು ಬೇಸರಿಸಿಕೊಂಡ.

**ಅರ್ಚನಾ ವಿ. ರಾವ್**



ಕಲೆ: ಗಣೇಶ ಆಚಾರ್ಯ